ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಕೊಡಿಗಿನಲ್ಲಿರುವ ಜಮ್ಮಾ ಜಮೀನಿನ ಬಗ್ಗೆ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಜಮ್ಮಾ ಮತ್ತು ಸಾಗುವಳಿ ಜಾಗಗಳನ್ನು ಅನುಭವದಾರರಿಗೆ ಪರಿಹಾರ ಪಾವತಿಮಾಡಿ ಸ್ವಾಧೀನ ಪಡಿಸಿಕೊಳ್ಳಲು ವಿನಂತಿಸಲಾಗಿದೆ. ಈ ಬಗ್ಗೆ ಇನ್ನೂ ತೀರ್ಮಾನವಾಗಬೇಕಾಗಿದೆ.

ಆ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಹಾಡಿ, ಬೆಟ್ಟ, ಸ್ಟೀಟ್, ಕುಂಕಿ ಅರಣ್ಯ ಪ್ರದೇಶಗಳಿಗೆ ಜಮ್ಮಾ ಜಮೀನಿಗೆ ತೆಗೆದುಕೊಳ್ಳ ಬಹುದಾದ ನಿರ್ಣಯ ಅನ್ವಯಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

**ಕುಮಟಾದ ಅಘನಾಶಿನಿ ನದಿಯಲ್ಲಿ ಬಿಳುಪಿನ ಚಿಪ್ಪು ತೆಗೆಯುವುದು.**

771 - ಡಾ:ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪರಿಸರ ಜೀವಿಶಾಸ್ತ್ರ ಮತ್ತು ವಿಜ್ಞಾನ, ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕುಮಟಾದ ಅಘನಾಶಿನಿ ನದಿಯಲ್ಲಿ ಬಿಳುಪಿನ ಚಿಪ್ಪು ತೆಗೆಯುವುದಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಮ್ಮತಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಅದಕ್ಕೆ ಸಂಬಂಧಿಸಿದಂತೆ ಪರಿಸರ ವಿಜ್ಞಾನ ಇಲಾಖೆಯ ಒಪ್ಪಿಗೆ ಪಡೆಯಲಾಗಿದೆಯೇ?*

*ಇ) ದೊಡ್ಡ ಪ್ರಮಾಣದಲ್ಲಿ ಈ ಚಿಪ್ಪುಗಳನ್ನು ತೆಗೆಯುವುದರಿಂದ ಬಡಜನರ ಆಹಾರಕ್ಕೆ ಖೋತಾ ಆಗುವುದನ್ನು ಮತ್ತು ಪರಿಸರದಲ್ಲಿ ಅಸಮತೋಲನಾವಾಗುವುದಿಲ್ಲವೆ?*

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಈಗಾಗಲೇ ಕಾರಣ ಕೇಳುವ ನೋಟೀಸ್ ಕೊಟ್ಟಿದ್ದು, ಈ ಕ್ರಿಯೆಯಿಂದ ಪರಿಸರಕ್ಕೆ ಹಾನಿಯಾಗುವುದೆಂದು ಖಾತ್ರಿಯಾದರೆ ಇದನ್ನು ತಡೆಯಲು ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುವುದು.

**ರಾಜ್ಯದಲ್ಲಿರುವ ಎಸ್.ಎಸ್.ಎಲ್.ಸಿ, ಟಿ.ಸಿ. ಹೆಚ್. ತರಬೇತಿ ಹೊಂದಿರುವ ನಿರುದ್ಯೋಗಿಗಳಿಗೆ ಶಿಕ್ಷಕರ ಹುದ್ದೆ.**

772 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?